"ಮಧುರ ಮಕ್ಕಳೇ - ಮುಂಜಾನೆ ಎದ್ದು ತಂದೆಯನ್ನು ಬಹಳ ಪ್ರೀತಿಯಿಂದ ನೆನಪು ಮಾಡಿರಿ, ತಂದೆಯ ನೆನಪು ಮಾಡುತ್ತೀರೆಂದರೆ ತಂದೆಯವರೂ ಪ್ರೀತಿ ಮಾಡುವರು, ಆಕರ್ಷಣೆಯಾಗುವುದು"

ಗೀತೆ: ನಿಮ್ಮನ್ನು ಪಡೆದ ನಾವು ಜಗತ್ತನ್ನೇ ಪಡೆದೆವು......

ಓಂ ಶಾಂತಿ. ಮಧುರಾತಿ ಮಧುರ ಮಕ್ಕಳಿಗೆ ತಂದೆಯು ಮತ್ತೆ-ಮತ್ತೆ ತಿಳಿಸುತ್ತಾರೆ - ಮಕ್ಕಳೇ, ತಮ್ಮನ್ನು ಆತ್ಮನೆಂದು ತಿಳಿಯಿರಿ, ಈ ಶರೀರವು ನನ್ನದಲ್ಲ, ಇದೂ ಸಹ ಸಮಾಪ್ತಿಯಾಗುವುದು. ನಾವು ತಂದೆಯ ಬಳಿ ಹೋಗಬೇಕಾಗಿದೆ - ನಿಮ್ಮಲ್ಲಿ ಈ ರೀತಿ ಜ್ಞಾನದ ಮಸ್ತಿಯಲ್ಲಿ ಇರುವುದರಿಂದ ಆಕರ್ಷಣೆಯು ಬಹಳ ಬರುವುದು. ಈ ಹಳೆಯ ವಸ್ತ್ರವನ್ನಂತು ಬಿಡಬೇಕಾಗಿದೆ, ಇಲ್ಲಿರುವುದಿಲ್ಲ, ಈ ಶರೀರದೊಂದಿಗಿನ ಮಮತ್ವವನ್ನು ಬಿಟ್ಟು ಬಿಡಬೇಕೆನ್ನುವುದು ನಿಮಗೆ ಗೊತ್ತಿದೆ. ಈ ಶರೀರವು ಕೇವಲ ಸೇವೆಗಾಗಿ ಇದೆ, ಇದರಲ್ಲಿ ಮಮತ್ವವಿಲ್ಲ, ಈಗ ಮನೆಗೆ ಹೋಗಬೇಕು ಅಷ್ಟೇ. ಸಂಗಮದ ಈ ಸಮಯವು ಪುರುಷಾರ್ಥಕ್ಕಾಗಿ ಬಹಳ ಅವಶ್ಯಕತೆಯಿದೆ. ಈಗಷ್ಟೇ ತಿಳಿಯುತ್ತೀರಿ - ನಾವು 84 ಜನ್ಮಗಳ ಚಕ್ರವನ್ನು ಸುತ್ತಿದೆವು, ತಂದೆಯವರು ಹೇಳುತ್ತಾರೆ - ಭಲೆ ವ್ಯಾಪಾರ-ವ್ಯವಹಾರ ಇತ್ಯಾದಿಯನ್ನು ಮಾಡಿರಿ, ಗೃಹಸ್ಥ ವ್ಯವಹಾರದಲ್ಲಿರುತ್ತಾ ಬುದ್ಧಿಯಲ್ಲಿ ಈ ನೆನಪಿರಲಿ - ಇದೆಲ್ಲವೂ ಸಮಾಪ್ತಿ ಆಗುವುದಿದೆ. ಈಗ ಮನೆಗೆ ಹಿಂತಿರುಗಿ ಹೋಗಬೇಕಾಗಿದೆ. ತಂದೆಯೂ ಸಹ ಸದಾ ಮನೆಯಲ್ಲಿಯೇ ಇರುತ್ತಾರಲ್ಲವೆ. ಭಲೆ 8 ಗಂಟೆಗಳು ವ್ಯಾಪಾರ ಮುಂತಾದವುಗಳಲ್ಲಿ ಉಪಯೋಗ ಮಾಡಿರಿ, 8 ಗಂಟೆಗಳಲ್ಲಿ ವಿಶ್ರಾಂತಿ ಪಡೆಯಿರಿ. ಉಳಿದ ಸಮಯವನ್ನು ಬೇಹದ್ದಿನ ತಂದೆಯೊಂದಿಗೆ ವಾರ್ತಾಲಾಪ ಮಾಡಿರಿ.

ತಂದೆಯ ಶ್ರೀಮತವಿದೆ - ಮಧುರ ಮಕ್ಕಳೇ, ನಿರಂತರ ನೆನಪಿನ ಯಾತ್ರೆಯಲ್ಲಿರಿ, ನೆನಪಿನ ಯಾತ್ರೆಯಲ್ಲಿ ಎಷ್ಟಿರುತ್ತೀರೋ ಅಷ್ಟು ಪ್ರಕೃತಿಯು ತಮ್ಮ ದಾಸಿಯಾಗುವುದು. ಸನ್ಯಾಸಿಗಳು ಜನರ ಬಳಿ ಎಂದಿಗೂ ಬೇಡುವುದಿಲ್ಲ, ಅವರಂತು ಯೋಗಿಗಳಲ್ಲವೆ, ನಾವು ಬ್ರಹ್ಮ ನಲ್ಲಿ ಲೀನವಾಗಬೇಕೆನ್ನುವುದು ನಿಶ್ಚಯವಿರುತ್ತದೆ. ಅದರಲ್ಲಿ ಬಹಳ ಪರಿಪಕ್ವವಿರುತ್ತಾರೆ, ನಾವು ಈ ಶರೀರವನ್ನು ಬಿಟ್ಟು ಹೋಗುತ್ತೇವೆ ಎನ್ನುವುದರಲ್ಲಿಯೇ ಇರುತ್ತಾರೆ. ಬಹಳ ಪರಿಶ್ರಮ ಪಡುತ್ತಾರೆ. ಭಕ್ತಿಮಾರ್ಗದಲ್ಲಿ ಕೆಲವು ಭಕ್ತರು ದೇವತೆಗಳೊಂದಿಗೆ ಮಿಲನವಾಗಲು ತನ್ನ ಜೀವಘಾತವನ್ನೂ ಮಾಡಿಕೊಳ್ಳುತ್ತಾರೆ. ಆತ್ಮಘಾತವೆಂದು ಹೇಳುವುದಿಲ್ಲ, ಅದಾಗುವುದೂ ಇಲ್ಲ. ನೀವು ಮಕ್ಕಳು ಯೋಗದಲ್ಲಿ ಇರುತ್ತೀರೆಂದರೆ ಅಮರರಾದಂತೆ. ಇದನ್ನು ಮಾಡೋಣ...... ಎಂದಿಗೂ ಯಾವುದೇ ವಿಚಾರವೇ ಬರುವುದಿಲ್ಲ, ಆದರ ಇಂತಹ ಶಕ್ತಿಶಾಲಿ ಸ್ಥಿತಿಯಿರಬೇಕು. ಮೊಟ್ಟ ಮೊದಲು ತಮ್ಮಲ್ಲಿ ನೋಡಿಕೊಳ್ಳಬೇಕು - ನಮ್ಮಲ್ಲಿ ಯಾವುದೇ ಕೊರತೆಯಿಲ್ಲವೇ? ಕೊರತೆ ಇರದಿದ್ದರೂ ಸೇವೆಯನ್ನೂ ಸಹ ಬಹಳ ಚೆನ್ನಾಗಿ ಮಾಡಬಹುದು. ತಂದೆಯನ್ನು ಮಕ್ಕಳು ಪ್ರತ್ಯಕ್ಷ ಮಾಡುವರು, ಮಕ್ಕಳು ತಂದೆಯನ್ನು ಪ್ರತ್ಯಕ್ಷ ಮಾಡುವರು. ತಂದೆಯವರು ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದರು, ನಂತರ ನೀವು ಮಕ್ಕಳು ಹೊಸ-ಹೊಸಬರಿಗೆ ತಂದೆಯ ಪರಿಚಯ ಕೊಡಬೇಕಾಗಿದೆ. ಮಕ್ಕಳನ್ನಂತು ತಂದೆಯು ಬುದ್ಧಿವಂತರನ್ನಾಗಿ ಮಾಡಿ ಬಿಟ್ಟಿದ್ದಾರೆ. ತಂದೆಗೆ ಗೊತ್ತಿದೆ - ಬಹಳ ಒಳ್ಳೊಳ್ಳೆಯ ಮಕ್ಕಳಿದ್ದಾರೆ, ಅವರು ಸೇವೆ ಮಾಡಿ ಬರುತ್ತಾರೆ. ಹಗಲು-ರಾತ್ರಿ ಇದೇ ವಿಚಾರ ನಡೆಯುತ್ತದೆ - ನಾವು ಇವರ ಜೀವನವನ್ನು ಹೇಗೆ ರೂಪಿಸುವುದು, ಇದರಿಂದ ನಮ್ಮ ಜೀವನವೂ ಉನ್ನತಿಯಾಗುತ್ತದೆ. ನಾವು ನಮ್ಮ ಹಳ್ಳಿಯವರ ಉದ್ಧಾರ ಮಾಡೋಣ, ನಮ್ಮ ಸಮಾನರ ಸೇವೆ ಮಾಡೋಣವೆಂದು ಖುಷಿಯಾಗುತ್ತದೆ, ಪ್ರತಿಯೊಬ್ಬರೂ ಒಲವಿರುತ್ತದೆ. ತಂದೆಯೂ ಸಹ ತಿಳಿಸುತ್ತಾರೆ - ಮನೆಯೇ ಮೊದಲ ಪಾಠಶಾಲೆ. ತಂದೆಯು ಕುಳಿತು ಮಕ್ಕಳಿಗೆ ಶಿಕ್ಷಣ ಕೊಡುತ್ತಾರೆ - ಮಕ್ಕಳೇ, ನೀವು ಮೊದಲು ತಮ್ಮ ಉನ್ನತಿ ಮಾಡಿಕೊಳ್ಳಬೇಕಾಗಿದೆ.

ತಂದೆಯವರಿಗೆ ಗೊತ್ತಿದೆ - ಆತ್ಮಿಕ ಕಲ್ಪ ವೃಕ್ಷವು ಕಲ್ಪದ ಮೊದಲಿನಂತೆಯೇ ಇದೆ. ಇದರಲ್ಲಿ ಎಲ್ಲರ ವಿಭಾಗಗಳಿವೆ, ನೀವು ಮುಂದೆನಡೆದಂತೆ ಎಲ್ಲರೂ ಹೇಗಿರುತ್ತಾರೆ...... ಎಲ್ಲದರ ಸಾಕ್ಷಾತ್ಕಾರ ಮಾಡುವಿರಿ, ಅವಶ್ಯವಾಗಿ ವಂಶಾವಳಿ ಇದೆಯಲ್ಲವೆ. ಬುದ್ಧಿಯೂ ಹೇಳುತ್ತದೆ- ಅಲ್ಲಿಂದ ಆತ್ಮರು ನಂಬರ್ವಾರ್ ಆಗಿ ಬರುತ್ತಾರೆ. ಅಂದಮೇಲೆ ಮಕ್ಕಳು ವಿಚಾರ ಸಾಗರ ಮಂಥನ ಮಾಡಬೇಕು- ಇಂತಿಂತಹ ಸೇವೆ ಮಾಡಬೇಕು, ಇದನ್ನು ಮಾಡಬೇಕು, ಜೊತೆ-ಜೊತೆಗೆ ತಂದೆಯ ನೆನಪೂ ಇರಬೇಕು, ನೆನಪಿನಿಂದಲೇ ಉನ್ನತಿಯಾಗುವುದು. ಡ್ರಾಮಾ ಯೋಜನೆಯನುಸಾರ ಏನು ಕಳೆಯಿತೋ ಅದು ಸರಿಯಿದೆ ಎಂದು ತಂದೆಯು ಹೇಳುತ್ತಾರೆ.

ಮುದ್ದಾದ ಮಕ್ಕಳೇ, ಮುಂದೆ ನಡೆದಂತೆ ನಿಮ್ಮಲ್ಲಿ ಯೋಗಬಲದ ಶಕ್ತಿಯು ಬಂದು ಬಿಡುತ್ತದೆ. ನಂತರ ನೀವು ಸ್ವಲ್ಪ ತಿಳಿಸುತ್ತೀರೆಂದರೆ ತಕ್ಷಣ ತಿಳಿದು ಬಿಡುತ್ತಾರೆ. ಇದೂ ಸಹ ಜ್ಞಾನ ಬಾಣವಲ್ಲವೆ. ಬಾಣವು ನಾಟುತ್ತದೆಯೆಂದ ಗಾಯಗೊಳಿಸುತ್ತದೆ.

ಮೊದಲು ಗಾಯವಾಗುತ್ತದೆ ನಂತರ ತಂದೆಯ ಮಗುವಾಗುತ್ತಾರೆ. ಅದಕ್ಕಾಗಿ ಏಕಾಂತದಲ್ಲಿ ಕುಳಿತು ಯುಕ್ತಿಗಳನ್ನು ರಚಿಸಬೇಕು. ರಾತ್ರಿಯಲ್ಲಿ ಮಲಗಿ ಬೆಳಗ್ಗೆ ಎದ್ದೇಳುವುದಲ್ಲ. ಮುಂಜಾನೆ ಎದ್ದು ಬಹಳ ಪ್ರೀತಿಯಿಂದ ತಂದೆಯನ್ನು ನೆನಪು ಮಾಡಬೇಕು. ರಾತ್ರಿಯೂ ತಂದೆಯ ನೆನಪಿನಲ್ಲಿ ಮಲಗಬೇಕು. ತಂದೆಯ ನೆನಪೇ ಮಾಡದಿದ್ದರೆ ಮತ್ತೆ ತಂದೆಯು ಹೇಗೆ ಪ್ರೀತಿ ಮಾಡುವರು, ಆಕರ್ಷಣೆಯೇ ಆಗುವುದಿಲ್ಲ. ಭಲೆ ತಂದೆಯವರಿಗೆ ಗೊತ್ತಿದೆ - ಡ್ರಾಮಾದಲ್ಲಿ ಎಲ್ಲಾ ಪ್ರಕಾರದಲ್ಲಿಯೂ ನಂಬರ್ವಾರ್ ಆಗುತ್ತಾರೆ ಗೊತ್ತಿದ್ದರೂ ಶಾಂತವಾಗಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ! ಪುರುಷಾರ್ಥ ಮಾಡಿಸುವರಲ್ಲವೆ. ಮಕ್ಕಳು ಡ್ರಾಮಾ ಎಂದು ಹೇಳುತ್ತಾ ನಿಂತು ಬಿಡಬಾರದು, ಇಲ್ಲದಿದ್ದರೆ ಅಂತಿಮ ಸಮಯದಲ್ಲಿ ಬಹಳ ಪಶ್ಚಾತ್ತಾಪ ಪಡಬೇಕಾಗುತ್ತದೆ. ಪ್ರಭು ನಾನೇನು ಅಂತದ್ದು ಮಾಡಿದೆನು! ಮಾಯೆಗೆ ವಶರಾದಿರಿ! ತಂದೆಯವರಿಗಂತು ದಯೆಯುಂಟಾಗುವುದು, ಸುಧಾರಣೆಯಾಗದಿದ್ದರೆ ಅವರ ಗತಿಯೇನಾಗುವುದು, ಅಳುತ್ತಾರೆ, ದುಃಖಿಸುತ್ತಾರೆ, ಶಿಕ್ಷೆಯನ್ನು ಅನುಭವಿಸುತ್ತಾರೆ. ಆದ್ದರಿಂದ ತಂದೆಯು ಪದೇ-ಪದೇ ಶಿಕ್ಷಣವನ್ನು ಕೊಡುತ್ತಾರೆ - ಮಕ್ಕಳೇ, ನೀವು ಪರಿಪಕ್ವವಾಗಬೇಕು. ಮತ್ತೆ-ಮತ್ತೆ ಪರಿಶೀಲನೆ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ಮಕ್ಕಳೂ ತಮ್ಮೊಂದಿಗೆ ಕೇಳಿಕೊಳ್ಳಿರಿ - ನಮಗೆ ತಂದೆಯಿಂದ ಎಲ್ಲವೂ ಸಿಕ್ಕಿದೆ, ಹಾಗಾದರೆ ನನ್ನಲ್ಲಿ ಯಾವ ವಸ್ತುವಿನ ಕೊರತೆಯಿದೆ? ತಮ್ಮಲ್ಲಿ ಬಹಳ ಚೆನ್ನಾಗಿ ನೋಡಿಕೊಳ್ಳಬೇಕು. ಹೇಗೆ ನಾರದನಿಗೆ ಕೇಳಲಾಯಿತು - ಲಕ್ಷ್ಮಿಯನ್ನು ದರ್ಶನ ಮಾಡುವುದಕ್ಕೆ ತಮ್ಮನ್ನು ಯೋಗ್ಯನೆಂದು ತಿಳಿಯುವಿರಾ? ತಂದೆಯೂ ಸಹ ಕೇಳುತ್ತಾರೆ - ಲಕ್ಷ್ಮಿಯನ್ನು ದರ್ಶನ ಮಾಡಲು ಯೋಗ್ಯರಾಗಿದ್ದೀರಾ? ಯಾವ-ಯಾವ ಕೊರತೆಗಳಿವೆ, ಅದನ್ನು ತೆಗೆಯುವ ಪುರುಷಾರ್ಥ ಮಾಡಬೇಕಾಗಿದೆ. ಹೊಸ-ಹೊಸ ಮಕ್ಕಳಿಗೂ ತಿಳಿಸಲಾಗುತ್ತದೆ - ಹೇಳಿರಿ, ನಿಮ್ಮಲ್ಲಿ ಯಾವುದೇ ಕೊರತೆಗಳಿಲ್ಲವೇ? ಏಕೆಂದರೆ ನೀವೀಗ ಪರಿಪಕ್ವವಾಗಬೇಕು, ತಂದೆಯು ಈ ರೀತಿ ಮಾಡುವುದಕ್ಕಾಗಿಯೇ ಬರುತ್ತಾರೆ ಅಂದಮೇಲೆ ತಮ್ಮೊಳಗೆ ಕೇಳಿಕೊಳ್ಳಿರಿ - ನಾವು ಈ ಲಕ್ಷ್ಮೀ-ನಾರಾಯಣರಂತೆ ಪರಿಪಕ್ವವಾಗಿ ಇದ್ದೇವೆಯೇ? ಒಂದುವೇಳೆ ಕೊರತೆಗಳಿದ್ದರೆ ತಂದೆಗೆ ತಿಳಿಸಬೇಕು - ಬಾಬಾ, ಇಂತಿಂತಹ ಕೊರತೆಗಳು ನಮ್ಮಿಂದ ಹೋಗುತ್ತಿಲ್ಲ, ಅದಕ್ಕಾಗಿ ಏನಾದರೂ ಉಪಾಯ ತಿಳಿಸಿರಿ. ಸರ್ಜನ್ನ ಮೂಲಕವೇ ರೋಗ ಸಮಾಪ್ತಿಯಾಗಲು ಸಾಧ್ಯ. ಅಂದಮೇಲೆ ಪ್ರಾಮಾಣಿಕತೆಯಿಂದ, ಸತ್ಯವಾಗಿ ನೋಡಿಕೊಳ್ಳಿ - ನನ್ನಲ್ಲಿ ಯಾವ ಕೊರತೆಗಳಿವೆ! ಅದನ್ನು ತಿಳಿಸುತ್ತೀರೆಂದರೆ ತಂದೆಯು ಸಲಹೆ ಕೊಡುವರು. ಬಹಳಷ್ಟು ಕೊರತೆಗಳಿವೆ, ಕೆಲವರಲ್ಲಿ ಕ್ರೋಧವಿದೆ ಅಥವಾ ಲೋಭವಿದೆ, ಇಲ್ಲದಿದ್ದರೆ ವ್ಯರ್ಥ ಚಿಂತನೆಯಿದೆ. ಆದ್ದರಿಂದ ಅವರಲ್ಲಿ ಜ್ಞಾನದ ಧಾರಣೆಯಾಗಲು ಸಾಧ್ಯವಿಲ್ಲ. ತಂದೆಯವರು ಪ್ರತಿನಿತ್ಯವೂ ತಿಳಿಸುತ್ತಾರೆ, ಇದರ ಬಗ್ಗೆ ಇಷ್ಟೊಂದು ತಿಳಿಸುವ ಅವಶ್ಯಕತೆಯಿಲ್ಲ ಆದರೆ ಧಾರಣೆ ಮಾಡಿಕೊಳ್ಳುವ ಮಾತಲ್ಲವೆ. 5 ವಿಕಾರಗಳ ಮೇಲೆ ವಿಜಯಿಯಾಗುವ ಮಾತು ಈಗಿನದೇ ಆಗಿದೆ. ನಿಮ್ಮಲ್ಲಿ ಯಾವುದೇ ಅಂತಹ ಭೂತವಿಲ್ಲವೇ (ಅಲೆದಾಡುವ ಭೂತ), ಜನ್ಮ-ಜನ್ಮಾಂತರದಿಂದ ಈ 5 ವಿಕಾರಗಳ ಪ್ರವೇಶತೆ ಆಗಿರುವುದರಿಂದ ದುಃಖಿಯನ್ನಾಗಿ ಮಾಡಿದೆ. ಕಾಮದ ಭೂತಕ್ಕಾಗಿ ಪ್ರತಿನಿತ್ಯವೂ ತಿಳಿಸಲಾಗುತ್ತದೆ. ಕಣ್ಣುಗಳು ಬಹಳಷ್ಟೇ ಮೋಸ ಮಾಡುತ್ತದೆ ಆದ್ದರಿಂದ ನಾನು ಆತ್ಮ, ಇವರೂ ಆತ್ಮನಾಗಿದ್ದಾರೆ, ಹೀಗೆ ಆತ್ಮವನ್ನು ನೋಡುವ ಅಭ್ಯಾಸವನ್ನು ಬಹಳ ಚೆನ್ನಾಗಿ ಮಾಡಿಕೊಳ್ಳಬೇಕಾಗಿದೆ.ನೀವು ಆತ್ಮರಂತು ಸಹೋದರ-ಸಹೋದರರಲ್ಲವೆ. ಅಂದಮೇಲೆ ಈ ಶರೀರವನ್ನು ನೋಡಬಾರದು. ನಾವು ಅತ್ಮರೆಲ್ಲರೂ ಹಿಂತಿರುಗಿ ಮನೆಗೆ ಹೋಗುವವರು, ತಂದೆಯು ಕರೆದುಕೊಂಡು ಹೋಗುವುದಕ್ಕಾಗಿ ಬಂದಿದ್ದಾರೆ. ಉಳಿದಂತೆ ಇದನ್ನು ನೋಡಿಕೊಳ್ಳಬೇಕು - ನಾವು ಸರ್ವಗುಣ ಸಂಪನ್ನರಾಗಿದ್ದೇವೆಯೇ? ಯಾವ ಗುಣದ ಕೊರತೆಯಿದೆ? ಈ ಆತ್ಮನಲ್ಲಿ ಯಾವ ಕೊರತೆಯಿದೆ ಎನ್ನುವುದನ್ನು ಆತ್ಮವನ್ನು ನೋಡಿ ತಿಳಿಸಲಾಗುತ್ತದೆ. ಇವರಿಂದ ಈ ರೋಗವು ಹೊರಟು ಹೋಗಬೇಕು ಎಂದು ಕುಳಿತು ಶಕ್ತಿಯನ್ನು ಕೊಡಬೇಕು. ಮಕ್ಕಳು ತಂದೆಯೊಂದಿಗೆ ಬಹಳ ಮಧುರಾತಿ ಮಧುರವಾಗಿ ಮಾತನಾಡಬೇಕು - ಬಾಬಾ ತಾವು ಹೀಗಿದ್ದೀರಿ! ಬಾಬಾ, ತಾವೆಷ್ಟು ಮಧುರವಾಗಿದ್ದೀರಿ! ತಂದೆಯ ನೆನಪಿನಿಂದ, ತಂದೆಯ ಮಹಿಮೆ ಮಾಡುವುದರಿಂದ ಈ ಭೂತಗಳು ಓಡಿ ಹೋಗುತ್ತಿರುತ್ತವೆ ಮತ್ತು ನಿಮ್ಮಲ್ಲಿ ಖುಷಿಯೂ ಇರುತ್ತದೆ.

ನೀವು ತಿಳಿದಿದ್ದೀರಿ - ಈ ವೃಕ್ಷವು ಬಹಳ ನಿಧಾನ-ನಿಧಾನವಾಗಿ ವೃದ್ಧಿ ಹೊಂದುತ್ತದೆ. ಮಾಯೆಯಂತು ನಾಲ್ಕೂ ಕಡೆಗಳಿಂದ ಮುತ್ತಿಗೆ ಹಾಕುತ್ತದೆ, ಒಂದೇ ಸಾರಿ ಮಾಯಾವಾಗುವಷ್ಟು ಮಾಯೆಯ ನೆರಳು ಬೀಳುತ್ತದೆ. ತಂದೆಯ ಕೈಯನ್ನೇ ಬಿಟ್ಟು ಬಿಡುತ್ತಾರೆ. ನೀವು ಪ್ರತಿಯೊಬ್ಬ ಮಕ್ಕಳ ಸಂಬಂಧವು ತಂದೆಯ ಜೊತೆಗಿದೆ, ಉಳಿದ ಮಕ್ಕಳೆಲ್ಲರೂ ನಂಬರ್ವಾರ್ ಆಗಿ ನಿಮಿತ್ತರಾಗಿದ್ದಾರೆ. ಒಳ್ಳೆಯದು!

ಅತಿ ಮಧುರ, ಅತಿ ಮುದ್ದಾದ ಸರ್ವ ಅಗಲಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾ-ಪಿತಾ ಬಾಪ್ದಾದಾರವರ ಹೃದಯದಾಳದಿಂದ, ಬಹಳ ಪ್ರೀತಿಯಿಂದ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ತಂದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಅವ್ಯಕ್ತ ಮಹಾವಾಕ್ಯ-ಅಂತಿಮ ಸೇವೆಯ ಅಂತಿಮ ಸ್ವರೂಪ:

ತಮ್ಮ ಅಂತಿಮ ಸ್ವರೂಪದ ಸಾಕ್ಷಾತ್ಕಾರವಾಗುತ್ತಿರುತ್ತದೆಯೇ? ಏಕೆಂದರೆ ಎಷ್ಟೆಷ್ಟು ಸಮೀಪಕ್ಕೆ ಬರುತ್ತಿರುತ್ತೀರಿ, ಅಷ್ಟು ಸನ್ಮುಖದಲ್ಲಿ ವಸ್ತುವು ಕಾಣಿಸುತ್ತಿದೆಯೆಂಬಂತೆ ಅನುಭವವಾಗುವುದು. ಈಗೀಗ ಇದಾಗಿ ಬಿಡುತ್ತೇವೆ ಎನ್ನುವಂತೆಯೇ ಅನುಭವವಾಗುವುದು. ವೃದ್ಧಾವಸ್ಥೆಯಲ್ಲಿ ಇರುವವರಿಗೆ ಹೇಗೆ ಸ್ಮೃತಿಯಿರುತ್ತದೆ - ಈಗ ವೃದ್ಧನಾಗಿದ್ದೇನೆ, ಈಗೀಗ ಹೋಗಿ

ಮಗುವಾಗುವೆನು. ಅದೇ ರೀತಿಯಲ್ಲಿ ತಮ್ಮ ಅಂತಿಮ ಸ್ವರೂಪದ ಸ್ಮೃತಿಯಲ್ಲ ಆದರೆ ಸ್ಪಷ್ಟವಾಗಿ ಸನ್ಮುಖದಲ್ಲಿ ಈಗ ಇದಾಗಿದ್ದೇನೆ, ಮತ್ತೆ ಇದಾಗುವೆನು ಎಂಬ ಸಾಕ್ಷಾತ್ಕಾರವಾಗಲಿ. ಹೇಗೆ ಪ್ರಾರಂಭದಲ್ಲಿ ಹೇಳುತ್ತಿದ್ದಿರಿ - ಯಾವಾಗ ಲಕ್ಷ್ಯದವರೆಗೆ ತಲುಪುತ್ತೇವೆಯೋ ಆಗ ಈ ರೀತಿ ಅನಿಸುತ್ತದೆ - ಹೆಜ್ಜೆಯಿಡುವಷ್ಟು ತಡವಷ್ಟೇ. ಒಂದು ಹೆಜ್ಜೆಯನ್ನಿಟ್ಟಿದ್ದೇವೆ, ಇನ್ನೊಂದನ್ನು ಇಡಬೇಕೆನ್ನುವಷ್ಟು ಅಂತರವಿದೆ. ಈ ರೀತಿಯಲ್ಲಿ ತಮ್ಮ ಅಂತಿಮ ಸ್ಥಿತಿಯ ಸಮೀಪತೆಯ ಅನುಭವವಾಗುವುದೇ? ಅಪರೋಕ್ಷ ಸ್ಪಷ್ಟ ಸಾಕ್ಷಾತ್ಕಾರವಾಗುತ್ತದೆಯೇ? ಹೇಗೆ ದರ್ಪಣದಲ್ಲಿ ತಮ್ಮ ರೂಪವು ಸ್ಪಷ್ಟವಾಗಿ ಕಾಣಿಸುತ್ತದೆಯೋ ಹಾಗೆಯೇ ಈ ಜ್ಞಾನದ ದರ್ಪಣದಲ್ಲಿಯೂ ತಮ್ಮ ಅಂತಿಮ ಸ್ವರೂಪವು ಸ್ಪಷ್ಟವಾಗಿ ಕಾಣಿಸಬೇಕು. ಸನ್ಮುಖದಲ್ಲಿ ಯಾರಾದರೂ ಬಹಳಷ್ಟು ಸುಂದರವಾದ ವಸ್ತ್ರವನ್ನಿಟ್ಟಿರುತ್ತಾರೆ ಮತ್ತು ಗೊತ್ತಾಗುತ್ತದೆ - ನಾವೀಗ ಇದನ್ನು ಧರಿಸಬೇಕು, ಅದನ್ನು ಬಯಸದಿದ್ದರೂ ಧಾರಣೆ ಮಾಡುವ ಸಮಯವು ಹೇಗೇಗೆ ಸಮೀಪ ಬರುತ್ತಿರುತ್ತದೆಯೋ ಗಮನವುಂಟಾಗುವುದು ಏಕೆಂದರೆ ಸನ್ಮುಖದಲ್ಲಿ ಕಾಣಿಸುತ್ತಿದೆ. ಅದೇರೀತಿ ತಮ್ಮ ಅಂತಿಮ ಸ್ವರೂಪವು ಸನ್ಮುಖದಲ್ಲಿ ಕಾಣಿಸುತ್ತದೆಯೇ? ಆ ಸ್ವರೂಪದ ಕಡೆ ಗಮನವುಂಟಾಗುವುದೇ? ಅದನ್ನು ಪ್ರಕಾಶ ಸ್ವರೂಪವೆಂದಾದರೂ ಹೇಳಿ ಅಥವಾ ವಸ್ತ್ರವೆಂದು ಹೇಳಿ, ಪ್ರಕಾಶತೆಯೇ ಪ್ರಕಾಶತೆಯು ಕಾಣಿಸುತ್ತದೆ. ಫರಿಶ್ತೆಯ ಸ್ವರೂಪವೇನಾಗಿರುತ್ತದೆ? ಲೈಟ್. ಅದನ್ನು ನೋಡುವವರೂ ಅನುಭವ ಮಾಡುವರು - ಇವರು ಪ್ರಕಾಶತೆಯ ವಸ್ತ್ರಧಾರಿಗಳು, ಪ್ರಕಾಶತೆಯೇ ಇವರ ಕಿರೀಟವಾಗಿದೆ, ಪ್ರಕಾಶತೆಯೇ ವಸ್ತ್ರವಾಗಿದೆ, ಪ್ರಕಾಶತೆಯೇ ಇವರ ಶೃಂಗಾರವಾಗಿದೆ. ಎಲ್ಲಿಯೇ ನೋಡಿದರೂ ಪ್ರಕಾಶತೆಯೇ ಕಾಣಿಸುವುದು. ಮಸ್ತಕದಲ್ಲಿ ನೋಡಿದರೂ ಪ್ರಕಾಶತೆಯ ಕಿರೀಟವು ಕಾಣಿಸುವುದು.ನಯನಗಳಲ್ಲಿಯೂ ಪ್ರಕಾಶತೆಯ ಕಿರಣಗಳು ಹೊರಬರುತ್ತಿರುವಂತೆ ಕಾಣಿಸುವುದು. ಇಂತಹ ರೂಪವು ಸನ್ಮುಖದಲ್ಲಿ ಕಾಣಿಸುತ್ತದೆಯೇ? ಏಕೆಂದರೆ ಶಕ್ತಿರೂಪದ ಪಾತ್ರವೇನು ನಡೆಯುತ್ತದೆ, ಅದು ಯಾರಿಂದ ಪ್ರಸಿದ್ಧವಾಗುವುದು? ಪ್ರಕಾಶತೆಯ ರೂಪದಿಂದ. ಯಾರೇ ಸನ್ಮುಖದಲ್ಲಿ ಬರುತ್ತಾರೆಂದರೆ ಒಂದು ಸೆಕೆಂಡಿನಲ್ಲಿ ಅಶರೀರಿ ಆಗಿ ಬಿಡಬೇಕು, ಅದು ಪ್ರಕಾಶತೆಯ ರೂಪದಿಂದಲೇ ಆಗುವುದು. ಈ ರೀತಿ ನಡೆಯುತ್ತಾ-ಸುತ್ತಾಡುತ್ತಾ ಲೈಟ್ ಹೌಸ್ ಆಗಿ ಬಿಡುತ್ತೀರೆಂದರೆ, ಈ ಶರೀರವು ಯಾರಿಗೂ ಕಾಣಿಸುವುದಿಲ್ಲ. ವಿನಾಶದ ಸಮಯದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂದರೆ ಸರ್ವ ಪರಿಸ್ಥಿತಿಗಳನ್ನು ಎದುರಿಸುವುದಕ್ಕಾಗಿ ಲೈಟ್ ಹೌಸ್ ಆಗಬೇಕಾಗುವುದು. ನಡೆಯುತ್ತಾ-ಸುತ್ತಾಡುತ್ತಾ ತಮ್ಮ ಆ ರೂಪದ ಅನುಭವವಾಗಬೇಕು. ಈ ಶರೀರವನ್ನೇ ಮರೆತು ಬಿಡಬೇಕು - ಈ ಅಭ್ಯಾಸ ಮಾಡಬೇಕಾಗಿದೆ. ಒಂದುವೇಳೆ ಯಾವುದೇ ಕಾರ್ಯವನ್ನು ಮಾಡಬೇಕು, ನಡೆಯಬೇಕು, ಮಾತ್ನಾಡಬೇಕೆಂದರೂ ನಿಮಿತ್ತವಾಗಿ ಆಕಾರಿ ಪ್ರಕಾಶ ರೂಪವನ್ನು ಧಾರಣೆ ಮಾಡಿಕೊಳ್ಳಬೇಕು. ಹೇಗೆ ಪಾತ್ರವನ್ನು ಅಭಿನಯಿಸುವ ಸಮಯದಲ್ಲಿ ವಸ್ತ್ರವನ್ನು ಧರಿಸುತ್ತೀರಿ, ಕಾರ್ಯವು ಸಮಾಪ್ತಿಯಾದ ನಂತರ ವಸ್ತ್ರವನ್ನು ಬದಲಾಯಿಸುವಿರಿ. ಒಂದು ಸೆಕೆಂಡಿನಲ್ಲಿ ಧರಿಸಿದಿರಿ, ಒಂದು ಸೆಕೆಂಡಿನಲ್ಲಿ ಅದರಿಂದ ಭಿನ್ನವಾಗಿ ಬಿಡಬೇಕು. ಯಾವಾಗ ಇಂತಹ ಅಭ್ಯಾಸವು ಪರಿಪಕ್ವವಾಗುವುದೋ ಆಗ ಈ ಕರ್ಮಭೋಗವೆಲ್ಲವೂ ಸಮಾಪ್ತಿಯಾಗುವುದು. ಯಾವ ರೀತಿ ಇಂಜೆಕ್ಷನ್ ಹಾಕಿ ನೋವನ್ನು ಸಮಾಪ್ತಿ ಮಾಡಿ ಬಿಡುತ್ತಾರೆ ಹಾಗೆ ಸಮಾಪ್ತಿಯಾಗುವುದು. ಹಠಯೋಗಿಗಳಂತು ಶರೀರದಿಂದ ಭಿನ್ನವಾಗುವ ಅಭ್ಯಾಸ ಮಾಡಿಸುತ್ತಾರೆ, ಅದೇರೀತಿ ಈ ಸ್ಮೃತಿ ಸ್ವರೂಪದ ಇಂಜೆಕ್ಷನ್ ಹಾಕಿಸಿಕೊಂಡು, ದೇಹದ ಸ್ಮೃತಿಯಿಂದ ಮಾಯವಾಗಿ ಬಿಡಿ. ಸ್ವಯಂ ತಾವೂ ಸಹ ತಮ್ಮನ್ನು ಲೈಟ್ ರೂಪದ ಅನುಭವ ಮಾಡುತ್ತೀರೆಂದರೆ, ಅನ್ಯರೂ ಸಹ ಅದೇ ಅನುಭವ ಮಾಡುವರು. ಇದೇ ಅಂತಿಮ ಸೇವೆಯಾಗಿದೆ, ಇದರಿಂದ ಎಲ್ಲಾ ವ್ಯವಹಾರಗಳೂ ಲೈಟ್ ಅರ್ಥಾತ್ ಹಗುರವಾಗುತ್ತದೆ. ಪರ್ವತವೂ ಸಹ ಸಾಸಿವೆಯಷ್ಟಾಗುತ್ತದೆ ಎಂದು ಹೇಳುತ್ತಾರಲ್ಲವೆ. ಹಗುರವಾದ ಕಾರ್ಯದಲ್ಲಿ ಬುದ್ಧಿಯನ್ನು ಉಪಯೋಗಿಸಬೇಕಾಗುವುದಿಲ್ಲ. ಅಂದಾಗ ಈ ಲೈಟ್ ಸ್ವರೂಪದ ಸ್ಥಿತಿಯಲ್ಲಿ ಮಾಸ್ಟರ್ ಎಲ್ಲವನ್ನೂ ಬಲ್ಲವರು ಅಥವಾ ಮಾಸ್ಟರ್ ತ್ರಿಕಾಲದರ್ಶಿಯ ಲಕ್ಷಣಗಳೇನಿವೆಯೋ ಅದು ಬಂದು ಬಿಡುತ್ತದೆ. ಮಾಡಬೇಕಾ ಅಥವಾ ಬೇಡವೇ ಎನ್ನುವುದನ್ನೂ ಯೋಚಿಸಬೇಕಾಗುವುದಿಲ್ಲ. ಬುದ್ಧಿಯಲ್ಲಿ ಅದೇ ಸಂಕಲ್ಪವುಂಟಾಗುವುದು, ಯಾವುದು ಯಥಾರ್ಥವಾಗಿ ಮಾಡಬೇಕಾಗಿದೆ. ಆ ಸ್ಥಿತಿಯ ಮಧ್ಯೆ ಯಾವುದೇ ಕರ್ಮಭೋಗದ ಅನುಭವವಿರುವುದಿಲ್ಲ. ಹೇಗೆ ಇಂಜೆಕ್ಷನ್ನ ನಶೆಯಲ್ಲಿ ಮಾತನಾಡುತ್ತಾರೆ, ಅಲುಗಾಡುತ್ತಾರೆ, ಎಲ್ಲವನ್ನು ಮಾಡುತ್ತಿದ್ದರೂ ಸ್ಮೃತಿಯಿರುವುದಿಲ್ಲ. ಮಾಡುತ್ತಿದ್ದೇವೆ ಎಂಬ ಸ್ಮೃತಿಯೂ ಇರುವುದಿಲ್ಲ, ಅದು ಸ್ವತಹವಾಗಿಯೇ ಆಗುತ್ತಿರುತ್ತದೆ. ಅದೇ ರೀತಿ ಕರ್ಮಭೋಗ ಅಥವಾ ಯಾವುದೇ ಪ್ರಕಾರದ ಕರ್ಮವಾಗುತ್ತಿರುತ್ತದೆ ಆದರೆ ಸ್ಮೃತಿಯಿರುವುದಿಲ್ಲ. ಅದು ತನ್ನ ಕಡೆಗೆ ಆಕರ್ಷಿಸುವುದಿಲ್ಲ. ಇಂತಹ ಸ್ಥಿತಿಯನ್ನೇ ಅಂತಿಮ ಸ್ಥಿತಿಯೆಂದು ಹೇಳಲಾಗುತ್ತದೆ. ಇದೇ ಅಭ್ಯಾಸವಾಗಬೇಕು, ಈ ಸ್ಥಿತಿಯೆಷ್ಟು ಸಮೀಪವಿದೆ? ಸಂಪೂರ್ಣವಾಗಿ ಸಮೀಪದವರೆಗೆ ತಲುಪಿದ್ದೀರಾ? ಯಾವಾಗ ಬೇಕೋ ಆಗ ಲೈಟ್ ರೂಪವಾಗಬೇಕು, ಯಾವಾಗ ಬೇಕೋ ಆಗ ಶರೀರದಲ್ಲಿ ಬರುವುದು ಅಥವಾ ಏನು ಮಾಡಬೇಕೋ ಅದನ್ನು ಮಾಡಬೇಕು. ಆ ಸ್ಥಿತಿಯು ಎಲ್ಲಿಯವರೆಗೆ ಏಕರಸ, ಸದಾಕಾಲದ ಸ್ಥಿತಿಯಿರುತ್ತದೆಯೋ ಅಲ್ಲಿಯವರೆಗೆ ಮಧ್ಯ-ಮಧ್ಯದಲ್ಲಿ ಸ್ವಲ್ಪ ಸಮಯವಂತು ಇರಲಿ. ಈ ರೀತಿ ಇರುತ್ತಾ-ಇರುತ್ತಾ ಸದಾಕಾಲದ ಸ್ಥಿತಿಯಾಗಿ ಬಿಡುತ್ತದೆ. ಹೇಗೆ ಸಾಕಾರದಲ್ಲಿ ಆಕಾರದ ಅನುಭವ ಮಾಡುತ್ತಿದ್ದಿರಲ್ಲವೆ. ಫಸ್ಟ್ ನಲ್ಲಿದ್ದರೂ ಫರಿಸ್ಥೆಯ ಅನುಭವ ಮಾಡುತ್ತಿದ್ದಿರಿ, ಈ ಸ್ಥಿತಿಯಂತು ಬರಬೇಕಲ್ಲವೆ. ಆರಂಭದಲ್ಲಿ ಅನೇಕರಿಗೆ ಈ ಸಾಕ್ಷಾತ್ಕಾರವಾಗುತ್ತಿತ್ತು, ಪ್ರಕಾಶತೆಯೇ ಕಾಣಿಸುತ್ತಿತ್ತು. ತಮ್ಮ ಪ್ರಕಾಶತೆಯ ಕಿರೀಟವೂ ಸಹ ಅನೇಕ ಬಾರಿ ಸಾಕ್ಷಾತ್ಕಾರ ಮಾಡುತ್ತಿದ್ದಿರಿ. ಆದಿಯಲ್ಲಿ ಯಾವ ಉದಾಹರಣೆಯಿತ್ತು, ಅದು ಅಂತ್ಯದಲ್ಲಿ ಪ್ರತ್ಯಕ್ಷ ಸ್ವರೂಪವಾಗುವುದು. ಸಂಕಲ್ಪದ ಸಿದ್ಧಿಯ ಸಾಕ್ಷಾತ್ಕಾರವಾಗುವುದು. ಹೇಗೆ ತಾವು ವಾಚಾದಿಂದ ನಿರ್ದೇಶನ ಕೊಡುತ್ತಿದ್ದಿರಲ್ಲವೆ, ಹಾಗೆಯೇ ಸಂಕಲ್ಪದಿಂದ ಎಲ್ಲಾ ವ್ಯವಹಾರಗಳು ನಡೆಸಲು ಸಾಧ್ಯವಿದೆ. ವಿಜ್ಞಾನದ ಶಕ್ತಿಯಿಂದ ಕೆಳಗಿರುವ ಪೃಥ್ವಿಯಿಂದ ಮೇಲಿನವರೆಗೂ ನಿರ್ದೇಶನವನ್ನು

ತೆಗೆದುಕೊಳ್ಳುತ್ತಿರುತ್ತಾರೆಂದರೆ, ಶ್ರೇಷ್ಠ ಸಂಕಲ್ಪದಿಂದ ವ್ಯವಹಾರ ನಡೆಯಲು ಸಾಧ್ಯವಿಲ್ಲವೇ? ಶಾಂತಿಯಿಂದಲೇ ವಿಜ್ಞಾನವು ಕಾಪಿ ಮಾಡಿದೆ. ಮುಂಚಿತವಾಗಿಯೇ ತಮ್ಮ ಮುಂದೆ ಉದಾಹರಣೆ ಕೊಡುವುದಕ್ಕಾಗಿ ಸ್ಪಷ್ಟ ರೂಪದಲ್ಲಿದ್ದಾರೆ. ಕಲ್ಪದ ಮೊದಲೂ ತಾವುಗಳೇ ಮಾಡಿದಿರಲ್ಲವೆ, ಮತ್ತೆ ಹೇಳುವ ಅವಶ್ಯಕತೆಯಿಲ್ಲ. ಹೇಗೆ ಹೇಳುವುದರಲ್ಲಿ ಮಾತನ್ನು ಸ್ಪಷ್ಟ ಮಾಡುತ್ತಾರೆಯೋ ಹಾಗೆಯೇ ಸಂಕಲ್ಪದಿಂದ ಎಲ್ಲಾ ವ್ಯವಹಾರಗಳು ನಡೆಯಲಿ. ಎಷ್ಟೆಷ್ಟು ಅನುಭವ ಮಾಡುತ್ತೀರಿ, ಒಬ್ಬರಿನ್ನೊಬ್ಬರ ಸಮೀಪಕ್ಕೆ ಬರುತ್ತಾ ಹೋಗುತ್ತೀರಿ, ಸಂಕಲ್ಪಗಳೂ ಸಹ ಒಬ್ಬರಿನ್ನೊಬ್ಬರೊಂದಿಗೆ ಮಿಲನವಾಗುತ್ತದೆ. ಲೈಟ್ ರೂಪವಾಗುವುದರಿಂದ ವ್ಯರ್ಥ ಸಂಕಲ್ಪ, ವ್ಯರ್ಥ ಸಾಯವು ಸಮಾಪ್ತಿಯಾದ ನಂತರ ಯಾವುದು ಆಗುವುದಿದೆಯೋ ಅದೇ ಸಂಕಲ್ಪವುಂಟಾಗುವುದು. ತಮ್ಮ ಬುದ್ಧಿಯಲ್ಲಿಯೂ ಅದೇ ಸಂಕಲ್ಪ ಉಂಟಾಗುತ್ತದೆ ಮತ್ತು ಏನನ್ನು ಮಾಡಬೇಕಿದೆಯೋ ಅದೇ ಸಂಕಲ್ಪವು ಅವರ ಬುದ್ಧಿಯಲ್ಲಿ ಉತ್ಪನ್ನವಾಗುತ್ತದೆ. ನವೀನತೆಯೆಂದರೆ ಇದಲ್ಲವೆ. ಈ ವ್ಯವಹಾರವನ್ನು ಯಾರಾದರೂ ನೋಡಿದರೆ ತಿಳಿಯುತ್ತಾರೆ - ಇವರ ವ್ಯವಹಾರವು ಹೇಳುವುದರಿಂದಲ್ಲ, ಸೂಚನೆಯಿಂದ ನಡೆಯುತ್ತದೆ. ದೃಷ್ಟಿಯಿಂದ ನೋಡಲಾಯಿತು ಮತ್ತು ತಿಳಿಯಲಾಯಿತು. ಇಲ್ಲಿಯೇ ಸೂಕ್ಷ್ಮವತನವಾಗಬೇಕಾಗಿದೆ. ಒಳ್ಳೆಯದು. ಓಂ ಶಾಂತಿ.

ವರದಾನ: ಭುಜಗಳಲ್ಲಿ ಸಮಾವೇಶವಾಗುವ ಹಾಗೂ ಭುಜಗಳಾಗಿ ಸೇವೆ ಮಾಡುವಂತಹ ಬ್ರಹ್ಮಾ ತಂದೆಯ ಸ್ನೇಹಿ ಭವ.

ಯಾವ ಮಕ್ಕಳು ತಂದೆಯ ಸ್ನೇಹಿಯಾಗಿದ್ದಾರೆಯೋ ಅವರು ಸದಾ ಬ್ರಹ್ಮಾ ತಂದೆಯ ಭುಜಗಳಲ್ಲಿ ಸಮಾವೇಶವಾಗಿ ಇರುತ್ತಾರೆ. ಬ್ರಹ್ಮಾ ತಂದೆಯ ಈ ಭುಜಗಳೇ ತಾವು ಮಕ್ಕಳ ಸುರಕ್ಷತೆಯ ಸಾಧನವಾಗಿದೆ. ಯಾರು ಪ್ರಿಯ, ಸ್ನೇಹಿಯಾಗಿರುತ್ತಾರೆಯೋ ಅವರು ಸದಾ ಭುಜಗಳಲ್ಲಿರುತ್ತಾರೆ. ಅಂದಮೇಲೆ ಸೇವೆಯಲ್ಲಿ ಬಾಪ್ದಾದಾರವರ ಭುಜಗಳಾಗಿದ್ದೀರಿ ಮತ್ತು ತಂದೆಯ ಭುಜಗಳಲ್ಲಿಯೇ ಇರುತ್ತೀರಿ. ಇವೆರಡು ದೃಶ್ಯಗಳ ಅನುಭವ ಮಾಡಿರಿ - ಕೆಲವೊಮ್ಮೆ ಭುಜಗಳಲ್ಲಿ ಸಮಾವೇಶವಾಗಿ ಬಿಡಿ ಮತ್ತೆ ಕೆಲವೊಮ್ಮೆ ಭುಜಗಳಾಗಿರುತ್ತಾ ಸೇವೆ ಮಾಡಿರಿ. ನಾವು ಭಗವಂತನ ಬಲ ಭುಜಗಳಾಗಿದ್ದೇವೆಂಬ ನಶೆಯಿರಲಿ.

ಸ್ಲೋಗನ್: ಸಂತುಷ್ಟತೆ ಹಾಗೂ ಪ್ರಸನ್ನತೆಯ ವಿಶೇಷತೆಯೇ ಹಾರುವ ಕಲೆಯ ಅನುಭವ ಮಾಡಿಸುತ್ತದೆ.

ಲವಲೀನ ಸ್ಥಿತಿಯ ಅನುಭವ ಮಾಡಿರಿ:

ತಂದೆಗೆ ಮಕ್ಕಳೊಂದಿಗೆ ಇಷ್ಟೂ ಪ್ರೀತಿಯಿದೆ, ಆ ಪ್ರೀತಿಯು ಅಮೃತವೇಳೆಯಿಂದಲೇ ಪಾಲನೆ ಮಾಡುತ್ತದೆ. ದಿನದ ಆರಂಭವೇ ಇಷ್ಟೊಂದು ಶ್ರೇಷ್ಠವಾಗುತ್ತದೆ! ಸ್ವಯಂ ಭಗವಂತನು ಮಿಲನವಾಗಲು ಕರೆಯುತ್ತಾರೆ, ವಾರ್ತಾಲಾಪ ಮಾಡುತ್ತಾರೆ, ಶಕ್ತಿಗಳನ್ನು ತುಂಬುತ್ತಾರೆ! ತಂದೆಯ ಪ್ರೀತಿಯ ಹಾಡು ತಮ್ಮನ್ನು ಏಳಿಸುತ್ತದೆ. ಎಷ್ಟೊಂದು ಸ್ನೇಹದಿಂದ ಕರೆಯುತ್ತಾರೆ, ಏಳಿಸುತ್ತಾರೆ - ಮಧುರ ಮಕ್ಕಳೇ, ಪ್ರಿಯವಾದ ಮಕ್ಕಳೇ, ಬನ್ನಿರಿ..... ಹಾಗಾದರೆ ಈ ಪ್ರೀತಿಯ ಪಾಲನೆಯ ಪ್ರತ್ಯಕ್ಷ ಸ್ವರೂಪದ `ಸಹಜ ಯೋಗಿ ಜೀವನ'ದ ಅನುಭವ ಮಾಡಿರಿ.